ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,
ಕುಂದಾಪುರ

ಸಿ.ಸಿ. ನಂಬ್ರ:1221/2016

ಚಾಸಾ:1 ಪ್ರಾಸಾ:1

ದಿನಾಂಕ: 04-08-2022

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಅಶೋಕ ಎಚ್ ಎಸ್ |
| ತಂದೆಯ ಹೆಸರು | : | ಲೇಟ್ ಸುಂದರ್ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಎ ಎಸ್ ಐ |
| ವಾಸ ಸ್ಥಳ | : | ಮಂಗಳೂರು |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು 2014 ರಿಂದ 2017 ರವರೆಗೆ ಕೋಟಾ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 19-11-2015 ರಂದು ಕೋಟಾ ಠಾಣಾ ಮೊಕದ್ದಮೆ ಸಂಖ್ಯೆ 172/2015 ರಲ್ಲಿ ಕಲಂ 379 ಐಪಿಸಿ ಪ್ರಕರಣದಲ್ಲಿ ನನ್ನನ್ನು ಮತ್ತು ಚಾಸಾ-2 ರವರನ್ನು ವಿಶೇಷ ಕರ್ತವ್ಯಕ್ಕೆ ನೇಮಿಸಲಾಗಿರುತ್ತದೆ. ಅದರಂತೆ ನಾನು ಮತ್ತು ಚಾಸಾ-2 ರವರು ಠಾಣೆಯಿಂದ ಹೊರಟು ಸುಮಾರು 10-30 ರ ಗಂಟೆಗೆ ಆರೋಪಿ ರಮೇಶ್ ಹುಣ್ಸೆಮಕ್ಕಿ ಎಸ್ ಡಿ ಸಿ ಸಿ ಬ್ಯಾಂಕ್ ಬಳಿ ಇರುವುದಾಗಿ ಮಾಹಿತಿ ಬಂದಿದ್ದು, ಅದರಂತೆ ಸದ್ರಿ ಸ್ಥಳಕ್ಕೆ ಹೋಗಿ ಆತನಿಗೆ ಆತನ ತಪ್ಪಿನ ಬಗ್ಗೆ ಅರಿವು ನೀಡಿ ಆತನನ್ನು ಹಿಡಿದು ಒಂದು ಅಟೋದಲ್ಲಿ ಕೋಟಾ ಪೊಲೀಸ್ ಠಾಣೆಗೆ ಕರೆದುಕೊಂಡು ಹೊರಟಿರುತ್ತೇವೆ. ಅಟೋ ರಿಕ್ಷಾದ ನೋಂದಣಿ ಸಂಖ್ಯೆ ಕೆಎ-20-ಸಿ-3375 ಆಗಿದ್ದು, ಸದ್ರಿ ಅಟೋ ರಿಕ್ಷಾ ಚಾಸಾ-3 ರವರಿಗೆ ಸೇರಿದ್ದಾಗಿರುತ್ತದೆ. ದಬ್ಬೆಕಟ್ಟೆ ಕೆದೂರು ಹತ್ತಿರ ಬರುವಾಗ ಆರೋಪಿ ರಮೇಶ ಅಟೋ ಚಾಲಕನನ್ನು ದೂಡಿ ಅಟೋದಿಂದ ತಪ್ಪಿಸಿಕೊಳ್ಳಲು ಪಲ್ಟಿ ಮಾಡಲು ಪ್ರಯತ್ನ ಪಟ್ಟಿರುತ್ತಾರೆ. ಆಗ ನಾವು ಹಿಡಿಯಲು ಪ್ರಯತ್ನಿಸಿದ್ದು, ಆಗ ನಾನು ಆರೋಪಿಯನ್ನು ಹಿಡಿಯಲು ಪ್ರಯತ್ನ ಪಡುತ್ತಿದ್ದಾಗ ನಮ್ಮ ಮೈ ಮೇಲೆ ಕೈ ಹಾಕಿ ನಮ್ಮ ಸಮವಸ್ತ್ರವನ್ನು ಹಿಡಿದು ಎಳೆದಾಡಿದ್ದು, ಆಗ ಬೊಬ್ಬೆ ಹಾಕಿರುತ್ತಾನೆ. ದಾರಿಯಲ್ಲಿ 3 ನೇ ಆರೋಪಿ ಬರುತ್ತಿದ್ದು ಅಟೋವನ್ನು ತಡೆದು

ನಿಲ್ಲಿಸಿರುತ್ತಾರೆ. ಅವರ ತಂಗಿಯ ಗಂಡನನ್ನು ಕರೆಯಿಸಿ ಆರೋಪಿಯನ್ನು ಬಿಡುವಂತೆ ನಮಗೆ ಒತ್ತಾಯ ಮಾಡಿರುತ್ತಾರೆ.

ನಂತರ ಭಾವ ಮಂಜುನಾಥ, ಗಣೇಶ್ ರವರನ್ನು ಕರೆಯಿಸಿದ್ದು, ಸದ್ರಿ ಆರೋಪಿ ರಮೇಶ್‌ನನ್ನು ರಿಕ್ಷಾದಿಂದ ಇಳಿಸಿ ನನಗೆ ಚಾಸಾ-2 ರವರಿಗೆ ಹೊಡೆದಿರುತ್ತಾರೆ. ಅವರು ಬರುವಾಗ ಅವರ ಕೈಯಲ್ಲಿ ದೊಣ್ಣೆ ಹಿಡಿದುಕೊಂಡು ಬಂದಿರುತ್ತಾರೆ. ದೊಣ್ಣೆಯಿಂದ 2 ನೇ ಆರೋಪಿ ನನ್ನ ಎದೆಗೆ ಮತ್ತು ಕೈಗೆ ಹೊಡೆದಿರುತ್ತಾರೆ. 5 ನೇ ಆರೋಪಿ ನನ್ನ ಕೈಗೆ ಹೊಡೆದಿರುತ್ತಾರೆ. ನಮ್ಮನ್ನು ಬಿಡಿಸಲು ಬಂದಂತಹ ಚಾಸಾ-4 ರವರಿಗೂ ಸಹ ಆರೋಪಿಗಳು ಹೊಡೆದಿರುತ್ತಾರೆ. ಅಲ್ಲಿಯೇ ದಾರಿಯಲ್ಲಿ ಹೋಗುತ್ತಿದ್ದ ಚಾಸಾ-5 ರವರು ಸ್ಥಳಕ್ಕೆ ಬಂದು ಗಾಯಗೊಂಡಿದ್ದ ನನ್ನನ್ನು ಮತ್ತು ಚಾಸಾ-2 ರವರನ್ನು ಅದೇ ಅಟೋದಲ್ಲಿ ಕುಂದಾಪುರದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. 1 ನೇ ಆರೋಪಿಯನ್ನು ಬಿಡದಿದ್ದಲ್ಲಿ ನಿಮ್ಮನ್ನು ಕೊಲ್ಲದೆ ಬಿಡುವುದಿಲ್ಲ ಎಂದು 2 ರಿಂದ 5 ನೇ ಆರೋಪಿಗಳು ಜೀವ ಬೆದರಿಕೆಯನ್ನು ಹಾಕಿರುತ್ತಾರೆ. 1 ನೇ ಆರೋಪಿಯನ್ನು ನಮ್ಮಿಂದ ಬಿಡಿಸಿ ಕರೆದುಕೊಂಡು ಹೋಗಿರುತ್ತಾರೆ. ಆರೋಪಿಗಳ ಈ ಕೃತ್ಯದಿಂದ ನಮ್ಮ ಸರಕಾರಿ ಕರ್ತವ್ಯಕ್ಕೆ ಅಡ್ಡಿ ಉಂಟಾಗಿರುತ್ತದೆ.

ರಿಕ್ಷಾವು ಪಲ್ಟಿ ಆಗಿ ಗಾಜು ಎಲ್ಲಾ ಒಡೆದು ಹೋಗಿರುತ್ತದೆ. ಚಾಸಾ-2 ರವರಿಗೂ ದೊಣ್ಣೆಯಿಂದ 2 ರಿಂದ 5 ನೇ ಆರೋಪಿಗಳು ಹೊಡೆದಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 4 ನೇ ಆರೋಪಿಯು ದೊಣ್ಣೆಯಿಂದ ನನಗೆ ಮತ್ತು ಚಾಸಾ-2 ರವರಿಗೆ ಹೊಡೆದಿರುತ್ತಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಠಾಣೆಗೆ ಬಂದು ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದಿಃ 20-11-2015 ರಂದು ಮಹಜರು ಮಾಡಲು ಕೆದೂರು ಗ್ರಾಮದ ದಬ್ಬೆಕಟ್ಟೆ ಹೋಗುವ ಟಾರ್ ರಸ್ತೆಯ ನರಸಿಂಹ ಕುಲಾಲ್ ಮನೆ ಹತ್ತಿರ ಹೋಗಿರುತ್ತೇವೆ. ಘಟನಾ ಸ್ಥಳವನ್ನು ನಾನೇ ತೋರಿಸಿಕೊಟ್ಟಿರುತ್ತೇನೆ. ಮಹಜರನ್ನು ಬೆಳಿಗ್ಗೆ 7-15 ರಿಂದ 7.45 ಗಂಟೆಯವರೆಗೆ ಮಾಡಿರುತ್ತೇವೆ. ಸಾಕ್ಷಿಯು ಸದ್ರಿ ಮಹಜರನ್ನು ನೋಡಿ ಗುರುತಿಸಿದ್ದು ಸದ್ರಿ ಮಹಜರನ್ನು ನಿಪಿ-2 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಕಾಶೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸದ್ರಿ ನಕಾಶೆಯನ್ನು ಮಹಜರು ಸಮಯದಲ್ಲಿ ಮಾಡಲಾಗಿರುತ್ತದೆ

ಎಂದು ನುಡಿದಿರುತ್ತಾರೆ. ತಕ್ಷೀರು ಸ್ಥಳದಲ್ಲಿ ಭಾವಚಿತ್ರವನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯು ಸದ್ರಿ ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು ಗುರುತಿಸಲಾಯಿತು.

ಅದೇ ದಿನ ಕೆದೂರು ರೈಲ್ವೆ ನಿಲ್ದಾಣದ ಬಳಿ ಮಹಜರನ್ನು ಮಾಡಲು ಹೋಗಿದ್ದು ನಾನು ಸ್ಥಳವನ್ನು ತೋರಿಸಿಕೊಟ್ಟಿರುತ್ತೇನೆ. ಮಹಜರು ಸಮಯದಲ್ಲಿ ನಕಾಶೆಯನ್ನು ತಯಾರು ಮಾಡಲಾಗಿರುತ್ತದೆ. ಸದ್ರಿ ಮಹಜರು ಮತ್ತು ನಕ್ಷೆಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ-5 ಮತ್ತು 6 ಎಂದು, ಅವುಗಳಲ್ಲಿನ ಸಾಕ್ಷಿ ಸಹಿಗಳನ್ನು ನಿಪಿ-5(ಎ) ಮತ್ತು ನಿಪಿ-6(ಎ) ಎಂದು ಗುರುತಿಸಲಾಯಿತು.

ದಿಃ 20-11-2015 ರಂದು ಠಾಣೆಯಲ್ಲಿ ನನ್ನ ಸಮವಸ್ತ್ರವನ್ನು ಮಹಜರು ಮೂಲಕ ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಸದ್ರಿ ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಸಮವಸ್ತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಮುಮಾ 1 ಎಂದು ಗುರುತಿಸಲಾಯಿತು. ರಿಕ್ಷಾವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಭಾವಚಿತ್ರದಲ್ಲಿರುವ ರಿಕ್ಷಾವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಮತ್ತು ನಿಪಿ-9 ಎಂದು ಗುರುತಿಸಲಾಯಿತು. ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಎರಡು ದೊಣ್ಣೆಯನ್ನು ನೋಡಿ ಗುರುತಿಸಿದ್ದು ಅದನ್ನು ಮುಮಾ 2 ಮತ್ತು ಮುಮಾ3 ಎಂದು ಗುರುತಿಸಲಾಯಿತು. 1 ನೇ ಆರೋಪಿಯನ್ನು ಕೋಟಾ ಪೊಲೀಸ್ ಠಾಣೆಯಲ್ಲಿ ಸಿ ಪಿ ಐ ರವರು ತೋರಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ ಜೆ ಎಸ್ ರವರಿಂದಃ**

ದಿಃ 19-11-2015 ರಂದು ಬೆಳಿಗ್ಗೆ 8-30 ಗಂಟೆಗೆ ನನ್ನನ್ನು ಮತ್ತು ಚಾಸಾ-2 ರವರನ್ನು ವಿಶೇಷ ಕರ್ತವ್ಯಕ್ಕೆ ನೇಮಿಸಿರುತ್ತಾರೆ. ಆರೋಪಿಯನ್ನು ಕ್ರೈಂ ನಂಬ್ರ 172/2016 ರಲ್ಲಿ ಪತ್ತೆ ಮಾಡಲು ನೇಮಿಸಿರುತ್ತಾರೆ. ನಾನು ಕೋಟಾ ಪೊಲೀಸ್ ಠಾಣೆಯಲ್ಲಿ ಇರುವಾಗ ಸಾರ್ವಜನಿಕರಿಂದ ಆರೋಪಿ ಹುಣ್ಸೆಮಕ್ಕಿಯ ಎಸ್ ಡಿ ಸಿ ಸಿ ಬ್ಯಾಂಕ್ ಬಳಿ ಇರುವುದಾಗಿ ಮಾಹಿತಿ ಬಂದಿರುತ್ತದೆ. ಹುಣ್ಸೆಮಕ್ಕಿಗೆ ಹೋಗಿ ತಲುಪಿದ ನಂತರ ಮಾಹಿತಿ ಬಂದಿರುವುದಿಲ್ಲ. ನಮ್ಮ ಠಾಣೆಯಿಂದ ಹುಣ್ಸೆಮಕ್ಕಿಗೆ 12 ಕಿ.ಮೀ ಆಗುತ್ತದೆ. ಚಾಸಾ-2 ಮತ್ತು ನಾನು ನನ್ನ ಮೋಟಾರು ಸೈಕಲಿನಲ್ಲಿ ಹೋಗಿರುತ್ತೇವೆ. ಮೋಟಾರು ಸೈಕಲಿನಲ್ಲಿ ಆರೋಪಿಯನ್ನು ಕರೆದುಕೊಂಡು ಬರಲು ತೊಂದರೆ ಇತ್ತಾ ಎಂದರೆ ನಾವು ಒಂದೇ ಮೋಟಾರು ಸೈಕಲಿನಲ್ಲಿ ಹೋಗಿದ್ದು 3 ಜನರು ಹೋಗಲು ಸಾಧ್ಯವಿಲ್ಲ. ನಮ್ಮ ಮೋಟಾರು ಸೈಕಲನ್ನು ಪರಿಚಯದ ಅಂಗಡಿಯವರ ಬಳಿ ನಿಲ್ಲಿಸಿ ಬಂದಿರುತ್ತೇವೆ.

ನಾವು ನೋಡಿದಾಗ 1 ನೇ ಆರೋಪಿ ಎಸ್ ಡಿ ಸಿ ಸಿ ಬ್ಯಾಂಕ್ ಬಳಿ ನಿಂತುಕೊಂಡಿದ್ದ. ಮೊದಲು ನಾವು 1 ನೇ ಆರೋಪಿಯನ್ನು ಬಂಧಿಸುವಾಗ ಪ್ರತಿರೋಧ ಮಾಡಿರುವುದಿಲ್ಲ ನಮ್ಮ ನಡುವೆ ಮಾತುಕತೆಯಾಗಿಲ್ಲ. ಹುಣ್ಸೆಮಕ್ಕಿ ಜನ ಸಂದಣಿ ಮತ್ತು ಅಂಗಡಿ ಮುಂಗಟ್ಟು ಇರುವ ಸ್ಥಳ ಎಂದರೆ ಸರಿ. ರಿಕ್ಷಾವನ್ನು ನಾವೇ ಮಾಡಿರುತ್ತೇವೆ. 1 ನೇ ಆರೋಪಿಯನ್ನು ಬಂಧಿಸಿ ಕರೆದುಕೊಂಡು ಹೋಗುವಾಗ ಅಕ್ಕಪಕ್ಕದವರೆಲ್ಲಾ ನೋಡುತ್ತಿದ್ದರು. ನಮಗೆ 9 ಗಂಟೆಗೆ ಆರೋಪಿ ಇರುವ ಬಗ್ಗೆ ಮಾಹಿತಿ ಬಂದಿತ್ತು. ಬೆಳಿಗ್ಗೆ 9-30 ಕ್ಕೆ 1 ನೇ ಆರೋಪಿಯನ್ನು ಹುಣ್ಸೆಮಕ್ಕಿಯಲ್ಲಿ ಬಂಧಿಸಿರುತ್ತೇವೆ. 1 ನೇ ಆರೋಪಿಯನ್ನು ಬಂಧಿಸಿದ ಬ ಗ್ಗೆ ಮಹಜರು ಮಾಡಿಲ್ಲ. 1 ನೇ ಆರೋಪಿಯನ್ನು ಬಂಧಿಸಿದ ಬಗ್ಗೆ ದಾಖಲೆ ಇಲ್ಲ ಎಂದರೆ ಸರಿ. ಘಟನೆ ಹುಣ್ಸೆಮಕ್ಕಿಯ ದಬ್ಬೆಕಟ್ಟೆಯಲ್ಲಿ ಆಗಿರುತ್ತದೆ. ತಕ್ಷೀರು ನಡೆದ ಸ್ಥಳ ಹುಣ್ಸೆಮಕ್ಕಿಯಿಂದ ಪಶ್ಚಿಮಕ್ಕೆ 5 ಕಿ.ಮೀ, ದಬ್ಬೆಕಟ್ಟೆಯಿಂದ ಪೂರ್ವಕ್ಕೆ 2 ಕಿ.ಮೀ ದೂರ ಇರುತ್ತದೆ. ನನ್ನ ಪ್ರಕಾರ ತಕ್ಷೀರು ನಡೆದಿದ್ದು ರೈಲ್ವೆ ಟ್ರ್ಯಾಕ್ ಬಳಿ.

ರಿಕ್ಷಾದಲ್ಲಿ ಮಧ್ಯದಲ್ಲಿ 1 ನೇ ಆರೋಪಿ, ಎಡಭಾಗದಲ್ಲಿ ಚಾಸಾ-2, ಬಲಭಾಗದಲ್ಲಿ ನಾನು ಕುಳಿತುಕೊಂಡಿದ್ದೇವು. ರೈಲ್ವೆ ಟ್ರ್ಯಾಕ್ ಬಂದ ಕೂಡಲೇ 1 ನೇ ಆರೋಪಿ ರಿಕ್ಷಾದಿಂದ ಹಾರಿ ಹೋಗಲು ಪ್ರಯತ್ನಿಸಿರುತ್ತಾರೆ. ನಾವು ಲಾಠಿ ಹಿಡಿದುಕೊಂಡಿರಲಿಲ್ಲ. ರಿಕ್ಷಾದಿಂದ ಹಾರಲು ಎಡಬದಿಯಲ್ಲಿ ಕುಳಿತಿದ್ದ ಚಾಸಾ-2 ರವರನ್ನು ದೂಡಿರುತ್ತಾರೆ. ನಾನು ಮತ್ತು ಚಾಸಾ-2 ರವರು 1 ನೇ ಆರೋಪಿಯನ್ನು ಹಿಡಿದುಕೊಂಡಿರುತ್ತೇವೆ. 1 ನೇ ಆರೋಪಿಯು ರಿಕ್ಷಾದ ಚಾಲಕನನ್ನು ದೂಡಿದ ಕಾರಣ ರಿಕ್ಷಾವನ್ನು ನಿಲ್ಲಿಸಿರುತ್ತಾರೆ. ಆ ಸ್ಥಳದಲ್ಲಿ ನಾವು ಅರ್ಧ ಗಂಟೆಗಳ ಕಾಲ ನಿಂತಿದ್ದೇವು. ಹುಣ್ಸೆಮಕ್ಕಿ ದಬ್ಬೆಕಟ್ಟೆ ರಸ್ತೆ ಹೆಚ್ಚು ವಾಹನಗಳು ಓಡಾಡುವ ರಸ್ತೆ ಎಂದರೆ ಸರಿ. ಹುಣ್ಸೆಮಕ್ಕಿಯಿಂದ ದಬ್ಬೆಕಟ್ಟೆಗೆ ಬರುವಾಗ ಅಕ್ಕಪಕ್ಕ ಅಂಗಡಿಗಳು, ಮನೆ ಇದೆ ಎಂದರೆ ಸರಿ. ನಾವು ದಬ್ಬೆಕಟ್ಟೆಯಲ್ಲಿ ರಿಕ್ಷಾ ನಿಲ್ಲಿಸಿದ 5 ನಿಮಿಷಕ್ಕೆ 3 ನೇ ಆರೋಪಿ ಬಂದಿರುತ್ತಾರೆ. 3 ನೇ ಆರೋಪಿಗೆ ಬೇರೆ ಯಾರೋ ಮಾಹಿತಿ ಕೊಟ್ಟಿರಬಹುದು. 3 ನೇ ಆರೋಪಿ 1 ನೇ ಆರೋಪಿತನನ್ನು ಬಿಟ್ಟು ಬಿಡುವಂತೆ ನನ್ನಲ್ಲಿ ಕೇಳಿಕೊಂಡಿರುತ್ತಾರೆ. ನಾವು 1 ನೇ ಆರೋಪಿಯನ್ನು ಬಿಡುವುದಿಲ್ಲ ಎಂದು ಹೇಳಿದ್ದು, 1 ನೇ ಆರೋಪಿ ಪೋನ್ ಮಾಡಿ ಉಳಿದ ಆರೋಪಿಗಳನ್ನು ಕರೆಯಿಸಿರುತ್ತಾರೆ. 3 ನೇ ಆರೋಪಿ ಪೋನ್ ಮಾಡಿದ ನಂತರ 4 ಮತ್ತು 5 ನೇ ಆರೋಪಿತರು ಬಂದಿರುತ್ತಾರೆ.

3 ನೇ ಆರೋಪಿ ಅವರ ಮನೆಯವರಿಗೆ ಪೋನ್ ಮಾಡಿ ಮಾತನಾಡಿದ್ದನ್ನು ನಾನು ನೋಡಿರುತ್ತೇನೆ. ಈ ವಿಚಾರವನ್ನು ನಿಪಿ-1 ದೂರಿನಲ್ಲಿ ಹೇಳಿರುತ್ತೇನೆ. ನಿಪಿ-1 ರಲ್ಲಿ ಹುಣ್ಸೆಮಕ್ಕಿ ದಬ್ಬೆಕಟ್ಟೆ ಮುಖ್ಯ ರಸ್ತೆಯ ರೈಲ್ವೆ ಟ್ರ್ಯಾಕ್ ಬಳಿ ಘಟನೆ ನಡೆದಿರುವುದಾಗಿ

ತಿಳಿಸಿರುತ್ತೇನೆ. 4 ಮತ್ತು 5 ನೇ ಆರೋಪಿತರು ತಕ್ಷೀರು ಸ್ಥಳಕ್ಕೆ ನಡೆದುಕೊಂಡು ಬಂದಿರುತ್ತಾರೆ. 4 ಮತ್ತು 5 ನೇ ಆರೋಪಿತರು 5 ನಿಮಿಷಗಳ ಕಾಲ ನಮ್ಮ ಜೊತೆಗೆ ಮಾತನಾಡಿರುತ್ತಾರೆ. 4 ಮತ್ತು 5 ನೇ ಆರೋಪಿತರು 1 ನೇ ಆರೋಪಿಯನ್ನು ಬಿಡಿ ಎಂದು ಕೇಳಿಕೊಂಡಿರುತ್ತಾರೆ. ನಂತರ ಅದೇ ಸ್ಥಳಕ್ಕೆ 2 ನೇ ಆರೋಪಿ ಬಂದಿರುತ್ತಾರೆ. ನಾನು ಸ್ವಲ್ಪ ಮುಂದೆ ಹೋದಾಗ ಮುಂದೆ ಹೋಗಲು ಬಿಟ್ಟಿರುವುದಿಲ್ಲ. ಚಾಸಾ-2 ರವರ ಬಳಿ ಮೊಬೈಲ್ ಇತ್ತು. ಸುಮಾರು ಅರ್ಧ ಗಂಟೆಗಳ ಕಾಲ ರಿಕ್ಷಾವನ್ನು ಮುಂದೆ ಹೋಗದಂತೆ ತಡೆದು ನಿಲ್ಲಿಸಿದ್ದರು. ನಮ್ಮ ಮತ್ತು 2 ರಿಂದ 5 ನೇ ಆರೋಪಿತರ ನಡುವೆ ಅರ್ಧ ಗಂಟೆಗಳ ಕಾಲ ವಾದ ವಿವಾದ ನಡೆದಿರುತ್ತದೆ. ವಾದ ವಿವಾದ ಮುಗಿದ ನಂತರ ಗಲಾಟೆಯಾಗಿರುತ್ತದೆ. ನಾವು ಪೊಲೀಸ್ ಠಾಣೆಗೆ ಮಾಹಿತಿ ತಿಳಿಸಲು ಸಾಧ್ಯವಾಗಲಿಲ್ಲ. ಅದೇ ಸ್ಥಳದಲ್ಲಿ ರಸ್ತೆಯ ಉತ್ತರಕ್ಕೆ ರಿಕ್ಷಾವನ್ನು ದೂಡಿ ಪಲ್ಟಿ ಮಾಡಿರುತ್ತಾರೆ. ರಿಕ್ಷಾದ ಗಾಜುಗಳು ಸ್ಥಳದಲ್ಲಿ ಬಿದ್ದಿದ್ದವು.

ರಿಕ್ಷಾವನ್ನು ಪಲ್ಟಿ ಮಾಡುವಾಗ ನಾವು ರಿಕ್ಷಾದ ಒಳಗಡೆ ಇದ್ದೇವು. ಚಾಸಾ-4 ರವರು ನಮ್ಮನ್ನು ರಿಕ್ಷಾದಿಂದ ಹೊರಗೆ ತಂದಿರುತ್ತಾರೆ. ರಿಕ್ಷಾ ಮುಗುಚಿದಾಗ ನಮಗೆ ಯಾರಿಗೂ ಪೆಟ್ಟಾಗಿರಲಿಲ್ಲ. ಸುಮಾರು ಮುಕ್ಕಾಲು ಗಂಟೆ ಗಲಾಟೆ ನಡೆದಿರುತ್ತದೆ. ರಸ್ತೆಯ ಅಕ್ಕಪಕ್ಕದವರು ಯಾರು ಬಂದಿರಲಿಲ್ಲ. ಚಾಸಾ-4 ರವರು 10-45 ಗಂಟೆಗೆ ಸ್ಥಳಕ್ಕೆ ಬಂದಿರುತ್ತಾರೆ. ಚಾಸಾ-4 ರವರು ಬರುವ ಮೊದಲು ಗಲಾಟೆ ನಡೆದಿತ್ತು. ಚಾಸಾ-4 ರವರ ಪರಿಚಯ ಇಲ್ಲ. ಚಾಸಾ-4 ರವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ. ಚಾಸಾ-5 ರವರು ನನ್ನನ್ನು ಮತ್ತು ಚಾಸಾ-2 ರವರನ್ನು ದಾರಿಯಲ್ಲಿ ಬಂದ ಒಂದು ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನನ್ನ ಪ್ರಕಾರ ತಕ್ಷೀರು ಸ್ಥಳಕ್ಕೆ ಮೊದಲು ಬಂದಿದ್ದು 3 ನೇ ಆರೋಪಿ, ನಂತರ 4 ಮತ್ತು 5 ನೇ ಆರೋಪಿತರು ಬಂದಿದ್ದು, ಆ ನಂತರ 2 ನೇ ಆರೋಪಿ ಮತ್ತು ಇತರೇ ಮೂವರು ಬಂದಿರುತ್ತಾರೆ. ಇತರೇ ಮೂವರು ಯಾರೆಂದು ಹೇಳಲು ಸಾಧ್ಯವಿಲ್ಲ.

4 ಮತ್ತು 5 ನೇ ಆರೋಪಿತರ ಕೈಯಲ್ಲಿ ದೊಣ್ಣೆ ಇತ್ತು. ನನ್ನ ಕೈ ಮತ್ತು ಎದೆಗೆ ದೊಣ್ಣೆಯಿಂದ 2 ಅಥವಾ 3 ಪೆಟ್ಟು ಬಿದ್ದಿರಬಹುದು ನಿಖರವಾಗಿ ಯಾರು ಹೊಡೆದಿರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಚಾಸಾ-2 ರವರಿಗೆ, ರಿಕ್ಷಾ ಚಾಲಕನಿಗೆ ದೊಣ್ಣೆಯಿಂದ ಹೊಡೆದಿರುತ್ತಾರೆ. ನಿಖರವಾಗಿ ಯಾರು ಹೊಡೆದಿರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಚಾಸಾ-3 ಮತ್ತು 4 ರವರು ನನಗೆ ಗಲಾಟೆ ನಡೆದ ದಿನವೇ ಪರಿಚಯಸ್ಥರಾಗಿರುತ್ತಾರೆ. ಅದಕ್ಕೂ ಮೊದಲು ಪರಿಚಯವಿಲ್ಲ. ತಕ್ಷೀರು ಸ್ಥಳದಿಂದ ನೇರವಾಗಿ ಆಸ್ಪತ್ರೆಗೆ ಹೋಗಿರುತ್ತೇವೆ. ನನ್ನ ಎದೆಗೆ ಒಳಪೆಟ್ಟು ಗಾಯವಾಗಿದ್ದು, ಕೈಗೆ ರಕ್ತಗಾಯವಾಗಿತ್ತು. ನಾನು

ಧರಿಸಿದ್ದ ಸಮವಸ್ತ್ರಕ್ಕೆ ರಕ್ತ ತಾಗಿರುವುದಿಲ್ಲ. ಆಸ್ಪತ್ರೆಗೆ ಹೋದಾಗ 12 ರಿಂದ 12-30 ಸಮಯವಾಗಿತ್ತು. ನನ್ನ ಎಡಕೈ ತೋಳಿಗೆ, ಬಲ ಎದೆಗೆ ಪೆಟ್ಟಾಗಿತ್ತು. ಚಾಸಾ-5 ರವರು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದಾರೆ ಎಂದು ವೈದ್ಯರಿಗೆ ತಿಳಿಸಿರುತ್ತೇನೆ. ಪೊಲೀಸ್ ಠಾಣೆಗೆ ಹೋಗುವಾಗ 12-45 ರ ಸಮಯವಾಗಿತ್ತು. ನಿಪಿ-1 ದೂರನ್ನು ನಾನೇ ಪೊಲೀಸ್ ಠಾಣೆಯಲ್ಲಿ ಬರೆದಿರುತ್ತೇನೆ.

ಮಹಜರು ತಯಾರಿಸುವಾಗ ಸ್ಥಳದಲ್ಲಿ  ಗಾಜಿನ ಚೂರುಗಳು ಕಂಡು ಬಂದಿರುತ್ತದೆ. ರಕ್ತದ ಕಲೆಗಳು ಇದ್ದ ಬಗ್ಗೆ ನಾನು ಗಮನಿಸಿರುವುದಿಲ್ಲ. ಒಂದು ಮುಷ್ಟಿಯ ಗಾಜಿನ ಚೂರುಗಳನ್ನು ಪೊಲೀಸರು ವಶಪಡಿಸಿಕೊಂಡಿರುತ್ತಾರೆ. ಮಹಜರಿನಲ್ಲಿ ಗಾಜಿನ ಚೂರುಗಳನ್ನು ವಶಪಡಿಸಿಕೊಂಡಿರುವ ಬಗ್ಗೆ ನಮೂದು ಇದೆಯಾ ಎಂದರೆ ನೆನಪಿಲ್ಲ.  ನಿಪಿ-2 ಮಹಜರಿನಲ್ಲಿ ಗಾಜಿನ ಚೂರು ಹೊರತುಪಡಿಸಿ ಬೇರೆ ಕುರುಹು ಇದ್ದ ಬಗ್ಗೆ ನಮೂದು ಇದೆಯಾ ಎಂದರೆ ಹೇಳಲು ಸಾಧ್ಯವಿಲ್ಲ. ನಿಪಿ-2 ಮತ್ತು 5 ದಬ್ಬೆಕಟ್ಟೆ ರಸ್ತೆಯಲ್ಲಿ ತಯಾರಿಸಿದ ದಾಖಲೆ ಅಲ್ಲ ಎಂದರೆ ಸರಿಯಲ್ಲ. ನನ್ನ ಸಿಬ್ಬಂದಿಯಾದ ರಾಘವೇಂದ್ರ ರವರು ನಿಪಿ-2 ಮತ್ತು 5 ದಾಖಲೆಯನ್ನು ಬರೆದಿರುತ್ತಾರೆ. ಕರಡು ನಕ್ಷೆಯನ್ನು ರಾಘವೇಂದ್ರ ರವರೇ ತಯಾರಿಸಿರುತ್ತಾರೆ. ಮಹಜರಿಗೆ  ಅಕ್ಕಪಕ್ಕದವರು ಸಹಿ ಮಾಡಿರುತ್ತಾರೆ. ನಿಪಿ-2 ಮತ್ತು  5  ಮತ್ತು ಕರಡು ನಕ್ಷೆಯನ್ನು ಪೊಲೀಸ್ ಠಾಣೆಯಲ್ಲಿ ನಮ್ಮ ಅನುಕೂಲತೆಗೆ ತಕ್ಕಂತೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-2 ರಿಂದ 6 ರ ದಾಖಲೆಗಳನ್ನು  ತಯಾರು ಮಾಡುವಾಗ ತಕ್ಷೀರು ಸ್ಥಳ ಉತ್ತರಕ್ಕೆ  ಎಂದು ಹೇಳಿರುತ್ತೇನೆ.

ನಿಪಿ-2 ರಿಂದ 6 ದಾಖಲೆಯಾಗುವ ಮೊದಲು ಬಟ್ಟೆಯನ್ನು ವಶಪಡಿಸಿಕೊಂಡಿರುತ್ತಾರೆ. ನಿಪಿ-7 ರ  ದಾಖಲೆಗೆ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ಗೊತ್ತಿಲ್ಲ. ಮುಮಾ1 ರ ಕಿಸೆ  ಎಳೆದು ಹರಿದು ಹೋಗಿರುತ್ತದೆ. ಮುಮಾ1 ರಲ್ಲಿ ಕಿಸೆ  ಹರಿದು ಹೋಗಿದ್ದು ಬಿಟ್ಟರೆ ಬೇರೆ ಹಾನಿಯಾಗಿರುವುದಿಲ್ಲ. ಮುಮಾ1 ರ ಜೇಬಿನ ಮೇಲೆ ಹರಿದ ಕುರುಹು ಕಂಡು ಬರುವುದಿಲ್ಲ. ನಿಪಿ-7 ರಲ್ಲಿ ಜೇಬಿನ ಮೇಲೆ ಹರಿದು ಹೋಗಿದೆ ಎಂದು ಕಾಣಿಸಿದರೆ ತಪ್ಪು ಎಂದರೆ  ಜೇಬಿನ ಮೇಲೆ ಹರಿದು ಹೋಗಿದೆ. ಈ ಕೇಸಿನ ಸಲುವಾಗಿ ನಾನು ಮುಮಾ1 ರ ಕಿಸೆಯನ್ನು ಹರಿದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ರಿಕ್ಷಾದ ಮುಂದಿನ ಗಾಜು ಸಂಪೂರ್ಣವಾಗಿ ಒಡೆದು ಹೋಗಿದ್ದು,  ಮೀರರ್ ಗೆ ಏನೂ ಆಗಿರಲಿಲ್ಲ. ರಿಕ್ಷಾದ ಮುಂಭಾಗ ಬೆಂಡಾಗಿತ್ತು. ನಿಪಿ-8 ಮತ್ತು 9 ರ ಪ್ರಕಾರ ರಿಕ್ಷಾದ ಗಾಜು ಒಡೆದು ಹೋಗಿರುವುದು ಕಂಡು ಬರುವುದಿಲ್ಲ. ರಿಕ್ಷಾದ ಗಾಜು ಜಖಂಗೊಂಡಿರುವುದಿಲ್ಲ ಒಡೆದು ಹೋಗಿರುತ್ತದೆ. ತಕ್ಷೀರು

ಸ್ಥಳದಲ್ಲಿ ಮುಮಾ2 ಮತ್ತು 3ನ್ನು ನೋಡಿದ್ದು ನಂತರ ನಾನು ಈಗ ನ್ಯಾಯಾಲಯದಲ್ಲಿ ನೋಡಿರುತ್ತೇನೆ.

ಮುಮಾ 2 ಮತ್ತು 3 ಕೋಲು ಎಂದರೆ ಸರಿಯಲ್ಲ. ನಾನು ದೊಣ್ಣೆಯಿಂದ ಹೊಡೆದಿರುತ್ತಾರೆ ಎಂದು ಹೇಳಿರುತ್ತೇನೆ. ಇಬ್ಬರು ಆರೋಪಿತರು ದೊಣ್ಣೆ ತಂದಿರುತ್ತಾರೆ ಎಂದು ಹೇಳಿರುತ್ತೇನೆ ಎಲ್ಲಾ ಆರೋಪಿತರು ದೊಣ್ಣೆ ತಂದಿರುವುದಾಗಿ ಹೇಳಿರುವುದಿಲ್ಲ. ಕ್ರೈಂ 172/2015 ರಲ್ಲಿ ಕರುಣಾಕರ ಹೆಗ್ಡೆಯವರು ಕೊಟ್ಟ ದೂರಾಗಿತ್ತು ಎಂದರೆ ಸರಿ. ಚಾಸಾ-4 ರವರ ವಾಹನ ಆ ಕ್ರೈಂ ನಂಬರ್ ಗೆ ಒಳಗೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ. ಕರುಣಾಕರ ಹೆಗ್ಡೆ ಮತ್ತು ಚಾಸಾ-4 ರವರು ನನಗೆ ಆತ್ಮೀಯರು ಎಂದರೆ ಸರಿಯಲ್ಲ. ಕರುಣಾಕರ ಹೆಗ್ಡೆ ಮತ್ತು ಚಾಸಾ-4 ರವರಿಗೂ ಹಾಗೂ ಆರೋಪಿತರಿಗೂ ತುಂಬಾ ವರ್ಷಗಳಿಂದ ವೈರತ್ವ ಇದೆ ಎಂದರೆ ನನಗೆ ಗೊತ್ತಿಲ್ಲ. ಆ ದ್ವೇಷಗೊಸ್ಕರ ನಮ್ಮ ಠಾಣಾ ಸಿಬ್ಬಂದಿಗಳು ವಿನಾಃ ಕಾರಣ ಆರೋಪಿತರ ಮನೆಯಲ್ಲಿ ಹೆಂಗಸರು ಮಾತ್ರ ಇರುವಾಗ ಅವರ ಮನೆಗೆ ರಾತ್ರಿ ನುಗ್ಗಿ ಅವರ ಮೇಲೆ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರ ಮನೆಗೆ ಹೋಗಿ ಗಲಾಟೆ ಮಾಡುವಾಗ ಯಾರು ಸಮವಸ್ತ್ರದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮನೆಯ ಸುತ್ತ ಮುತ್ತ ಇತರೇ ಸಾರ್ವಜನಿಕರ ಮನೆ ಇರುತ್ತದೆ ಎಂದರೆ ಸರಿ. ಆರೋಪಿತರು ನಮ್ಮ ವಿರುದ್ಧ ದೂರು ಕೊಡುತ್ತಾರೆ ಎಂದು ಆರೋಪಿತರ ಮೇಲೆ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ತಕ್ಷೀರು ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಮುಮಾ1 ರಿಂದ 3 ಕ್ಕೂ ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ಈ ಕೇಸಿಗೊಸ್ಕರ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**